ಅವಶ್ಯಕ ಸೌಲಭ್ಯಗಳಿಲ್ಲದೆ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಹೊಸ ಬಸ್ ನಿಲ್ದಾಣವನ್ನು ನಿರ್ಮಿಸುವ ಯೋಜನೆ ಸರ್ಕಾರಕ್ಕೆ ಇದೆಯೇ?

ಶ್ರೀ ಆಜೀಜ್ ಸೇಠ್(ಸಾರಿಗೆ ಸಚಿವರು):

ಅ) ಹೌದು.

ಆ) ಹೌದು.

ಬೆಳಗಾಂ ಮತ್ತು ಸಿಸಿ ವಿದ್ಯುಚ್ಛಕ್ತಿ ಮಂಡಳಿಗೆ ಸರ್ಕಾರಿ ಮತ್ತು ಖಾಸಗಿ ಸ್ಥಾವರಗಳಿಂದ ಬರಬೇಕಾದ ಹಣ

3343 - ಶ್ರೀ ಕೆ.ಸಿ. ಮಾಡಗೇಕರ್ ದೇಸಾಯಿ (ಹೀರೆಭಾಗೇವಾಡಿ) : ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾಂ ವೃತ್ತ ಮತ್ತು ಸಿಸಿ ವಿಭಾಗದ ವಿದ್ಯುಚ್ಛಕ್ತಿ ಮಂಡಳಿಗೆ ಸರ್ಕಾರಿ ಮತ್ತು ಖಾಸಗೀ ಸ್ಥಾವರಗಳಿಂದ ಬರಬೇಕಾಗಿರುವ ಒಟ್ಟು ಬಾಕಿ ಹಣ ಎಷ್ಟು? (ಬಾಕಿ ಇರುವ ಸ್ಥಾವರಗಳ ಪಟ್ಟಿಯನ್ನು ವಿವರಿಸತಕ್ಕದ್ದು).

ಆ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಬಾಕಿ ವಸೂಲಾತಿ ಕಾಯಿದೆ ಮತ್ತು ಬಾಕಿ ವಸೂಲಾತಿ ನಿಯಮಾವಳಿ 1978 ಇವ್ಯಗಳಲ್ಲದೆ ಈ ಬಾಕಿ ಹಣವನ್ನು ವಸೂಲಿ ಮಾಡಲು ಸರ್ಕಾರವು ತೆಗೆದುಕೊಂಡು ಕ್ರಮಗಳೇನು?

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಮಂತ್ರಿಗಳು):

ಅ) 31-03-1991ಕ್ಕೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ಬರಬೇಕಾಗಿರುವ ಬಾಕಿಯ ವಿವರಗಳು ಈ ಕೆಳಕಂಡಂತೆ ಇರುತ್ತದೆ.

ಸರ್ಕಾರೀ ಸ್ಥಾವರಗಳಿಂದ ಬರಬೇಕಾದ ಬಾಕಿ ವಿವರ -

ಕಾರ್ಯ ಮತ್ತು ಪಾಲನಾ	976.34	
ಬೆಳಗಾಂ ವೃತ್ತ	ಲಕ್ಷ	ರೂ.ಗಳು
ಕಾರ್ಯ ಮತ್ತು ಪಾಲನಾ	47.48	
ಸಿಸಿ ವಿಭಾಗ -2	ಲಕ್ಷ	ರೂ. ಗಳು

ಖಾಸಗೀ ಸ್ಥಾವರಗಳಿಂದ
ಬರಬೇಕಾದ ಬಾಕಿ ಹಣ

ಕಾರ್ಯ ಮತ್ತು ಪಾಲನಾ	4,594.63	
ಬೆಳಗಾಂ ವೃತ್ತ	ಲಕ್ಷ	ರೂ. ಗಳು.
ಕಾರ್ಯ ಮತ್ತು ಪಾಲನಾ	220.59	
ಸಿಸಿ ವಿಭಾಗ -2	ಲಕ್ಷ	ರೂ. ಗಳು

ಬಾಕಿಯಿರುವ ಸ್ಥಾವರಗಳ ವಿವರಗಳನ್ನು ಸಂಗ್ರಹಿಸಲಾಗುತ್ತಿದ್ದು ಅದನ್ನು ಸದ್ಯದಲ್ಲಿಯೇ ಒದಗಿಸಲಾಗುವುದು.

ಆ) ಸಂಬಂಧಪಟ್ಟವರಿಗೆ ಬಾಕಿ ಹಣವನ್ನು ಸಂದಾಯ ಮಾಡಲು ತಿಳುವಳಿಕೆಗಳನ್ನು ಕಳುಹಿಸಲಾಗಿದೆ ಮತ್ತು ಈ ಬಾಕಿ ಹಣವನ್ನು ತ್ವರಿತವಾಗಿ ವಸೂಲಿಮಾಡಲು ಒತ್ತಡ ತರಲಾಗುತ್ತಿದೆ.